# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರ್ನಾಟಕ ರಾಜ್ಯದಲ್ಲಿ ಒಂದು ಮಿಲಿಯನ್ ಟನ್ ಮೀನು ಉತ್ಪಾದಿಸಲು ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಅಗತ್ಯ ಮಾರ್ಗದರ್ಶನ ನೀಡುವ ಸಲುವಾಗಿ ಕೋರ್ ಸಮಿತಿ ರಚಿಸುವ ಕುರಿತು.

ಓದಲಾಗಿದೆ:- ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ: DoF-TECHOALL2/134/2021, ದಿನಾಂಕ: 14-09-2021.

******

**ಪ್ರಸ್ತಾವನೆ:**

ಮೇಲೆ ಓದಲಾದ ನಿರ್ದೇಶಕರು. ಮೀನುಗಾರಿಕೆ ಇಲಾಖೆ ಇವರ ಏಕ ಕಡತ ಪತ್ರದಲ್ಲಿ. ಕರ್ನಾಟಕ ರಾಜ್ಯದಲ್ಲಿರುವ ಜಲಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಒಂದು ಮಿಲಿಯನ್ ಟನ್ ಮೀನು ಉತ್ಪಾದಿಸಲು ಲಭ್ಯವಿರುವ ಜಿಲ್ಲಾವಾರು ಜಲಸಂಪನ್ಮೂಲಗಳ ಕರಡು ನಕ್ಷೆಯನ್ನು ಹಾಗೂ ಮೀನು ಕೃಷಿ ಕೈಗೊಳ್ಳಲು ಪೂರಕವಾದ ನಕ್ಷೆಯನ್ನು ವೈಜ್ಞಾನಿಕವಾಗಿ ರಚಿಸಲು ಡಾ|| ಸೀನಪ್ಪ ಡಿ., ಮೀನುಗಾರಿಕೆ ತಜ್ಞರು ಹಾಗೂ ಸಲಹೆಗಾರರು ಇವರ ಅಧ್ಯಕ್ಷತೆಯಲ್ಲಿ ಕೋರ್ ಸಮಿತಿಯನ್ನು ರಚಿಸಿ, ಕೋರ್ ಸಮಿತಿಗೆ ಸಂಪರ್ಕಕೊಂಡಿಯಾಗಿ ಕಾರ್ಯನಿರ್ವಹಿಸಲು ಶ್ರೀ ದಿನೇಶ್ ಕುಮಾರ್ ಕಳ್ಳೇರ, ಮೀನುಗಾರಿಕೆ ಅಪರ ನಿರ್ದೇಶಕರು (ಒಳನಾಡು), ಬೆಂಗಳೂರು ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ. ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-259 ಮೀಇಯೋ 2021, ಬೆಂಗಳೂರು**
**ದಿನಾಂಕ: 24-09-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯದಲ್ಲಿರುವ ಜಲಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಒಂದು ಮಿಲಿಯನ್ ಟನ್ ಮೀನು ಉತ್ಪಾದಿಸಲು ಲಭ್ಯವಿರುವ ಜಿಲ್ಲಾವಾರು ಜಲಸಂಪನ್ಮೂಲಗಳ ಕರಡು ನಕ್ಷೆಯನ್ನು ಹಾಗೂ ಮೀನು ಕೃಷಿ ಕೈಗೊಳ್ಳಲು ಪೂರಕವಾದ ನಕ್ಷೆಯನ್ನು ವೈಜ್ಞಾನಿಕವಾಗಿ ರಚಿಸಲು ಡಾ|| ಸೀನಪ್ಪ ಡಿ., ಮೀನುಗಾರಿಕೆ ತಜ್ಞರು ಹಾಗೂ ಸಲಹೆಗಾರರು ಇವರ ಅಧ್ಯಕ್ಷತೆಯಲ್ಲಿ ಕೆಳಕಂಡ ಕೋರ್ ಸಮಿತಿಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಿ ಆದೇಶಿಸಲಾಗಿದೆ.

| ಕ್ರಮ ಸಂಖ್ಯೆ | ಸಮಿತಿ ಸದಸ್ಯರು | |
|---|---|---|
| 1) | ಡಾ|| ಸೀನಪ್ಪ ಡಿ.,<br>ಮೀನುಗಾರಿಕೆ ತಜ್ಞರು ಹಾಗೂ ಸಲಹೆಗಾರರು | ಅಧ್ಯಕ್ಷರು |
| 2) | ಡಾ|| ಸೇಂಥಿಲ್ ವೆಲ್,<br>ಡೀನ್, ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು. | ಸದಸ್ಯರು |

| | | |
|---|---|---|
| 3) | ಡಾ|| ಕೃಷ್ಣರಾವ್ ಡಿ.ಎಸ್,<br>ನಿವೃತ್ತ ಪ್ರಧಾನ ವಿಜ್ಞಾನಿಗಳು, CIFRI, ಬೆಂಗಳೂರು. | ಸದಸ್ಯರು |
| 4) | ಡಾ|| ಶಿವಕುಮಾರ್ ಮಗದ,<br>ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಹೆಬ್ಬಾಳ. | ಸದಸ್ಯರು |
| 5) | ಶ್ರೀ ಟಿ.ಎಸ್.ವಿಶ್ವನಾಥ,<br>ಮೀನುಗಾರಿಕೆ ಉಪ ನಿರ್ದೇಶಕರು, ತುಮಕೂರು. | ಸದಸ್ಯರು |
| 6) | ಶ್ರೀ ಬಬಿನ್ ಬೋಪಣ್ಣ ಕೆ.,<br>ಮೀನುಗಾರಿಕೆ ಉಪ ನಿರ್ದೇಶಕರು, ಮಂಡ್ಯ. | ಸದಸ್ಯ ಕಾರ್ಯದರ್ಶಿ |

ಕೋರ್ ಸಮಿತಿಗೆ ಸಂಪರ್ಕಕೊಂಡಿಯಾಗಿ ಕಾರ್ಯನಿರ್ವಹಿಸಲು ಶ್ರೀ ದಿನೇಶ್ ಕುಮಾರ್ ಕಳ್ಳೇರ, ಮೀನುಗಾರಿಕೆ ಅಪರ ನಿರ್ದೇಶಕರು (ಒಳನಾಡು), ಬೆಂಗಳೂರು ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A
(ಕಾಮಾಕ್ಷಿ ಯು.ಎ.) 24/9/21
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4. ಡಾ|| ಸೀನಪ್ಪ ಡಿ., ಮೀನುಗಾರಿಕೆ ತಜ್ಞರು ಹಾಗೂ ಸಲಹೆಗಾರರು
5. ಡಾ|| ಸೇಂಥಿಲ್ ವೆಲ್, ಡೀನ್, ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು.
6. ಡಾ|| ಕೃಷ್ಣರಾವ್ ಡಿ.ಎಸ್, ನಿವೃತ್ತ ಪ್ರಧಾನ ವಿಜ್ಞಾನಿಗಳು, CIFRI, ಬೆಂಗಳೂರು.
7. ಡಾ|| ಶಿವಕುಮಾರ್ ಮಗದ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಹೆಬ್ಬಾಳ.
8. ಶ್ರೀ ಟಿ.ಎಸ್.ವಿಶ್ವನಾಥ, ಮೀನುಗಾರಿಕೆ ಉಪ ನಿರ್ದೇಶಕರು, ತುಮಕೂರು.
9. ಶ್ರೀ ಬಬಿನ್ ಬೋಪಣ್ಣ ಕೆ., ಮೀನುಗಾರಿಕೆ ಉಪ ನಿರ್ದೇಶಕರು, ಮಂಡ್ಯ.
10. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
11. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.